ಬೋಧನಾ ವಿಧಾನಗಳೆರಡರಲ್ಲೂ ಗೊಂದಲಗಳಿವೆ. ಯಾವ ನೆಲೆಗಳಲ್ಲಿ ಭಾಷೆಯನ್ನು ಗ್ರಹಿಕಾ ವಿಧಾನವಾಗಿಯೂ ಅಭಿವ್ಯಕ್ತಿ ಸಾಧನವಾಗಿಯೂ ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಖಚಿತತೆ ಅಗತ್ಯ; ಭಾಷೆಯನ್ನು ಬೋಧಿಸಲು ಸಾಧ್ಯವಿಲ್ಲ; ವಿದ್ಯಾರ್ಥಿಗಳ ಕಲಿಕೆಗೆ ಶಿಕ್ಷಕ ಸಹಕರಿಸಬೇಕಷ್ಟೆ; ಭಾಷಾ ಕೌಶಲ್ಯವನ್ನು ವರ್ಗಾಯಿಸಲು ಸಾಧ್ಯವಿಲ್ಲ; ಜ್ಞಾನ ಸಿದ್ಧ ರೂಪದಲ್ಲಿರುವುದಿಲ್ಲ; ಎರಡನ್ನೂ ಕಲಿಕಾರ್ಥಿ ಸ್ವಯಂ ಕಟ್ಟಿಕೊಳ್ಳಬೇಕು; ಅತೀ ಅವಲಂಬಿತ ಟೀಚರ್, ಟೆಕ್ಸ್ಟ್ ಮತ್ತು ಟೆಸ್ಟ್‌ಗಳಿಂದ ವಿದ್ಯಾರ್ಥಿಗಳನ್ನು ಬಿಡುಗಡೆಗೊಳಿಸಿ ಅವರ ಸ್ವತಂತ್ರ, ಸ್ವಾಯತ್ತ ಕಲಿಕೆಗೆ ಅವಕಾಶ ಮಾಡಿಕೊಡುವ ಹಸ್ತಕ್ಷೇಪ ಮುಕ್ತ ಬೋಧನೆ ಇಂದಿನ ಅಗತ್ಯ; ಭಾಷೆಯನ್ನು ಸಂವಹನ (communicative) ಮತ್ತು ಜ್ಞಾನಾರ್ಜನೆ(cognitive)ಯ ಉದ್ದೇಶಕ್ಕಾಗಿ ವಿದ್ಯಾರ್ಥಿಗಳು ಕಲಿಯಬೇಕಾಗಿದೆ; ನಮ್ಮ ಪರಿಸರದ ವ್ಯವಹಾರ ನಿರ್ವಹಣೆಗೆ ಕಲಿಯುವ ಭಾಷೆ ಪ್ರಯೋಜನವಾಗಬೇಕು; ಅದಕ್ಕೆ ಅಥೆಂಟಿಕ್ ಮಟೇರಿಯಲ್‌ಗಳನ್ನು ಪಠ್ಯದಲ್ಲಿ ಸೇರಿಸುವುದು ಸೂಕ್ತ; ಎರಡನೆಯದಾಗಿ ಆಯ್ದುಕೊಳ್ಳುವ ವಿಷಯಗಳನ್ನು ಶಾಸ್ತ್ರೀಯ ಶಿಸ್ತಿನಿಂದ, ತಾಂತ್ರಿಕ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡು ಅರಗಿಸಿಕೊಳ್ಳಲು ಭಾಷಾ ಕಲಿಕೆ ಪೂರಕವಾಗಿರಬೇಕು. ವಿಭಿನ್ನ ಕೋರ್ಸುಗಳ ಅಧ್ಯಯನಕ್ಕೂ ಅವು ಕರೆದೊಯ್ಯುವ ಉದ್ಯೋಗ ಕ್ಷೇತ್ರಕ್ಕೂ ಭಾಷೆಯ ಸಂರಚನಾ ಸ್ವರೂಪ ಮತ್ತು ಪಠ್ಯಸಾಹಿತ್ಯ ಸೇತುವೆಯಾಗಿರಬೇಕು. ಈ ಗುರಿಯನ್ನು ಸಾಧಿಸಲು ಭಾಷಾ ಪಠ್ಯದಲ್ಲಿ ವೈವಿಧ್ಯತೆಯ ತತ್ತ್ವಗಳನ್ನು ಅಳವಡಿಸಲು ಮರೆಯಬಾರದು.

ಕತೆಗಾರ ಶ್ರೀಧರ ಬಳಗಾರರಿಗೆ ವಿದಾಯ ಹೇಳುವಾಗ ಹಿಂದಿದ್ದ ಹಳಕಾರ ಕಾಡು ಆಗಲೇ ನಿರುಮ್ಮಳ ನಿದ್ರೆಗೆ ಸರಿಯುತ್ತಿದ್ದರೆ ಕುಮಟೆಯ ಕಡೆ ಮುಖ ಮಾಡಿದ ಹೆದ್ದಾರಿ ವಿದ್ಯುತ್ ಬೆಳಕಿನಲ್ಲಿ ಜೋಲು ಮುಖ ಹೊತ್ತು ಎರಡನೇ ಪಾಳಿಗೆ ತಯಾರಿ ನಡೆಸಿದಂತಿತ್ತು.

## ಎಂ.ಜಿ. ಹೆಗಡೆ

ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಡಾ. ಎ.ವಿ. ಬಾಳಿಗಾ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿರುವ ಎಂ ಜಿ. ಹೆಗಡೆ ವಿಮರ್ಶಕ, ಪುಸ್ತಕಗಳ ಸಂಪಾದಕ ಮತ್ತು ತಾಳಮದ್ದಲೆಗಳ ಅರ್ಥಧಾರಿ. ನಾಲ್ಕು ನಾಟಕಗಳನ್ನು ಬರೆದಿದ್ದಾರೆ. 'ಗೌರೀಶ ಕಾಯ್ಕಿಣಿ', 'And Where Shall I Roost' ಅವರ ಪ್ರಕಟಿತ ಪುಸ್ತಕಗಳಾಗಿವೆ. ಅವರು ಕೆಲಕಾಲ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಭಾಷಾ ನಿಕಾಯದ ನಿರ್ದೇಶಕರಾಗಿ ಹಾಗೂ ಇಂಗ್ಲಿಷ ವಿಭಾಗ ಮುಖ್ಯಸ್ಥರಾಗಿಯೂ ಕೆಲಸ ಮಾಡಿದ್ದಾರೆ.

ಸಂಪಾದಿಸಿದ ಮುಖ್ಯ ಪುಸ್ತಕಗಳು: 'ಸಹಯಾನ', 'ಕಟಾಂಜನ', 'ಅಮೃತಬಿಂದು', 'ಗೌರೀಶರ ಅತ್ಯುತ್ತಮ ಬರಹಗಳು', 'ಸಮುದಾಯದ ಗಾಂಧಿ', ಇಂಗ್ಲಿಷ್‌ನಲ್ಲಿ Rethinking Tagore, Our Own Voices, Initiation, Aspects of ELT'.

ಕನ್ನಡ ಕಾವ್ಯವನ್ನು ಇಂಗ್ಲಿಷ್‌ನಲ್ಲಿ ಅನುವಾದಿಸಿ ಪರಿಚಯಿಸುವ ವಾಚಿಕೆ Kannada Literature – From the Eleventh Century through the Nineteenth Century: A Reader ಹಾಗೂ ನ್ಯಾಯಮೂರ್ತಿ ನಾಗಮೊಹನದಾಸರ 'ಸಂವಿಧಾನದ ಓದು' ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಬಿ.ಎ. ಇಂಗ್ಲಿಷ್ ಐಚ್ಛಿಕ ತರಗತಿಗಳಿಗಾಗಿ ಎಂಟು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ.